**<u>ದಿನಾಂಕ 14-02-2025 ರಂದು ಸಾಕ್ಷಿಧಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>: ಪಾಟೀ ಸವಾಲುಃ  5 ಮತ್ತು 6 ನೇ ಪ್ರತಿವಾದಿ ಪರ ಶ್ರೀ.ಎ ಎಂ ಜೆ ವಕೀಲರಿಂದ :</u>**

ದಾವಾ ಸರ್ವೆ ನಂಬರ **99** ರ ಆಸ್ತಿ ನನಗೆ ಸೇರಿದ ಆಸ್ತಿ ಆಗಿರುತ್ತದೆ. ನಾನು ಮತ್ತು ಪ್ರತಿವಾದಿ **1** ರಿಂದ **3** ರವರು ಕೂಡಿಕೊಂಡು ಮೀಯಾಜಾನಸಾಬ ಕರೀಂಸಾಬ ಖತೀಬ ರವರಿಗೆ ಮಾರಾಟ ಮಾಡಿದ್ದೇವು ಎಂದರೆ ಸರಿ. ಈ ಬಗ್ಗೆ ಖರೀದಿ ಪತ್ರ ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ನೋಂದಾಗಿರುತ್ತದೆ ಎಂದರೆ ಸರಿ. ಆ ಖರೀದಿ ಪತ್ರಕ್ಕೆ ನಾನು, ಪ್ರತಿವಾದಿ **1** ರಿಂದ **3** ರವರು ಸಹಿ ಮಾಡಿರುತ್ತೇವೆ ಎಂದರೆ ಸರಿ. ಆ ಕ್ರಯದಂತೆ  ಮೀಯಾಜಾನಸಾಬ ಕರೀಂಸಾಬ ಖತೀಬ ರವರ ಹೆಸರಿಗೆ ಕಂದಾಯ ಇಲಾಖೆಯ ದಾಖಲೆಗಳು ಬಂದಿರುತ್ತವೆ ಎಂದರೆ ಸರಿ. ಈ ಬಗ್ಗೆ ಎಂ ಆರ್ ಹೆಚ್ **21/2014-15** ರಂತೆ ಡ  ಮಂಜೂರು ಆಗಿರುತ್ತದೆ ಎಂದರೆ ಸರಿ. ಆ ನಂತರ ಮೀಯಾಜಾನರವರು ತಲಾ **4** ಗುಂಟೆಯಂತೆ ಪ್ರತಿವಾದಿ **5** ಮತ್ತು **6** ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಈ ಬಗ್ಗೆ ಕ್ರಯ

ಪತ್ರ ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ನೋಂದಾಗಿರುತ್ತದೆ ಎಂದರೆ ಆಗಿರಬಹುದು ನನಗೆ ಗೊತ್ತಿಲ್ಲ. ಈ ಬಗ್ಗೆ ತಲಾ 4 ಗುಂಟೆ ಆಸ್ತಿ ಪ್ರತ್ಯೇಕವಾಗಿ 5 ಮತ್ತು 6 ಪ್ರತಿವಾದಿಯರಿಗೆ ಹಂಚಿಕೆ ಆಗಿದೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಆ 8 ಗುಂಟೆ ಜಮೀನನ್ನು ನ್ಯಾಯಾಲಯವು ನನ್ನ ಹಿಸ್ಸೆಗೆ ನೀಡಲು ನನ್ನದೇನು ತಕರಾರು ಇರುವುದಿಲ್ಲ.

: ಮರುವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್